Akashvani: Bangalore
National Bulletin In Kannada
29.11.2025 : 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*****

ಮುಖ್ಯಾಂಶಗಳು:

1. ೬೦ನೇ ಅಖಿಲ ಭಾರತ ಡಿಜಿಪಿ-ಐಜಿಪಿ ಸಮ್ಮೇಳನ; ವಿವಿಧ ಅಧಿವೇಶನಗಳ ಅಧ್ಯಕ್ಷತೆ ವಹಿಸಲಿರುವ ಪ್ರಧಾನಿ ನರೇಂದ್ರ ಮೋದಿ
2. ಅಂತಾರಾಷ್ಟ್ರೀಯ ಕಡಲ ಸಂಘಟನೆ-ಐಎಂಒ ಮಂಡಳಿಗೆ ಅತ್ಯಧಿಕ ಮತಗಳೊಂದಿಗೆ ಭಾರತ ಮರು ಆಯ್ಕೆ
3. ಗೋವಾದಲ್ಲಿ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸಕ್ಕೆ ತೆರೆ; ಚಲನಚಿತ್ರ ಪ್ರತಿಭೆಗಳಿಗೆ ಪ್ರಶಸ್ತಿ ಪ್ರದಾನ
4. ಸೈಯದ್ ಮೋದಿ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ; ವಿವಿಧ ವಿಭಾಗಗಳಲ್ಲಿ ಸೆಮಿಫೈನಲ್ ತಲುಪಿದ ಭಾರತೀಯ ಶೆಟ್ಲರ್‌ಗಳು

*******

ಛತ್ತೀಸ್‌ಗಢದ ರಾಯ್‌ಪುರದಲ್ಲಿ ನಿನ್ನೆ ಆರಂಭವಾಗಿರುವ ೬೦ನೇ ಅಖಿಲ ಭಾರತ ಪೊಲೀಸ್ ಮಹಾನಿರ್ದೇಶಕರು ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ - ಡಿಜಿಪಿ-ಐಜಿಪಿ ಸಮ್ಮೇಳನದಲ್ಲಿ ಇಂದು ಮತ್ತು ನಾಳೆ ನಡೆಯುವ ವಿವಿಧ ಅಧಿವೇಶನಗಳ ಅಧ್ಯಕ್ಷತೆಯನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಲಿದ್ದಾರೆ. ಸಮ್ಮೇಳನದ ಸಮಯದಲ್ಲಿ ಪ್ರಧಾನಿಯವರು ವಿಶಿಷ್ಟ ಸೇವೆಗಾಗಿ ರಾಷ್ಟ್ರಪತಿಗಳ ಪೊಲೀಸ್ ಪದಕವನ್ನು ಸಹ ಪ್ರದಾನ ಮಾಡಲಿದ್ದಾರೆ. ನಿನ್ನೆ ಸಮ್ಮೇಳನವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಡಿಜಿಪಿ-ಐಜಿಪಿ ಸಮ್ಮೇಳನವು ದೇಶದ ಆಂತರಿಕ ಭದ್ರತಾ ಸವಾಲುಗಳನ್ನು ಪರಿಹರಿಸಲು ಪ್ರಮುಖ ವೇದಿಕೆಯಾಗಿ ಹೊರಹೊಮ್ಮಿದೆ ಎಂದು ಕೇಂದ್ರ ಗೃಹ ಸಚಿವರು ಹೇಳಿದರು. ಸಮಸ್ಯೆಗಳು ಮತ್ತು ಸವಾಲುಗಳನ್ನು

ಗುರುತಿಸುವುದರಿಂದ ಹಿಡಿದು ಕಾರ್ಯತಂತ್ರಗಳು ಮತ್ತು ನೀತಿಗಳನ್ನು ರೂಪಿಸುವವರೆಗೆ ಇದು ಪ್ರಮುಖ ವೇದಿಕೆಯಾಗಿದೆ ಎಂದರು. ನಕ್ಸಲ್‌ವಾದದ ಕುರಿತು ಮಾತನಾಡಿದ ಅವರು, ಕಳೆದ ಏಳು ವರ್ಷಗಳಲ್ಲಿ ಕೇಂದ್ರ ಸರ್ಕಾರ, ೫೮೬ ಸುಭದ್ರ ಪೊಲೀಸ್ ಠಾಣೆಗಳನ್ನು ನಿರ್ಮಿಸುವ ಮೂಲಕ ಭದ್ರತಾ ಜಾಲವನ್ನು ಬಲಪಡಿಸಿದೆ ಎಂದು ಹೇಳಿದರು. ಇದರ ಪರಿಣಾಮವಾಗಿ, ೨೦೧೪ ರಲ್ಲಿ ೧೨೬ ರಷ್ಟಿದ್ದ ನಕ್ಸಲ್ ಪೀಡಿತ ಜಿಲ್ಲೆಗಳ ಸಂಖ್ಯೆ ಇಂದು ಕೇವಲ ೧೧ ಕ್ಕೆ ಇಳಿದಿದೆ. ಮುಂದಿನ ಸಮ್ಮೇಳನದ ಮೊದಲು ದೇಶವು ನಕ್ಸಲ್‌ವಾದದ ಭೀತಿಯಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ವಿಶಾಲವಾದ ಭದ್ರತಾ ಸವಾಲುಗಳನ್ನು ಉಲ್ಲೇಖಿಸಿದ ಸಚಿವರು, ದೇಶಕ್ಕೆ ಗಂಭೀರ ಸವಾಲಾಗಿದ್ದ ಮೂರು ತಾಣಗಳಾದ ನಕ್ಸಲಿಸಂ, ಈಶಾನ್ಯ ಪ್ರದೇಶ ಮತ್ತು ಜಮ್ಮು-ಕಾಶ್ಮೀರಗಳಿಗೆ ಕೇಂದ್ರ ಸರ್ಕಾರ ಶಾಶ್ವತ ಪರಿಹಾರಗಳನ್ನು ಒದಗಿಸಿದೆ ಎಂದು ಹೇಳಿದರು. ರಾಷ್ಟ್ರೀಯ ತನಿಖಾ ಸಂಸ್ಥೆಯನ್ನು ಬಲಪಡಿಸಲಾಗಿದೆ, ಯುಎಪಿಎಯನ್ನು ಹೆಚ್ಚು ಬಲಿಷ್ಠಗೊಳಿಸಲಾಗಿದೆ, ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ಪರಿಚಯಿಸಲಾಗಿದೆ ಹಾಗೂ ಮಾದಕ ದ್ರವ್ಯ ಮತ್ತು ಪರಾರಿಯಾದ ಅಪರಾಧಿಗಳ ವಿರುದ್ಧ ಬಲವಾದ ಕಾನೂನುಗಳನ್ನು ಜಾರಿಗೆ ತರಲಾಗಿದೆ ಎಂದರು. ಸಂಪೂರ್ಣವಾಗಿ ಜಾರಿಗೆ ಬಂದ ನಂತರ, ಭಾರತದಲ್ಲಿ ಪೊಲೀಸ್ ವ್ಯವಸ್ಥೆಯು ವಿಶ್ವದಲ್ಲೇ ಅತ್ಯಂತ ಆಧುನಿಕವಾಗುತ್ತದೆ ಎಂದು ಅವರು ಹೇಳಿದರು. ಕೇಂದ್ರ ಸರ್ಕಾರ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ - ಪಿಎಫ್ಐ ಅನ್ನು ನಿಷೇಧಿಸಿದ ನಂತರ, ಅವರ ಅಡಗುತಾಣಗಳ ಮೇಲೆ ದೇಶಾದ್ಯಂತ ದಾಳಿ ನಡೆಸಿ ಬಂಧಿಸಲಾಗಿದೆ ಎಂದ ಸಚಿವರು, ಇದು ಕೇಂದ್ರ-ರಾಜ್ಯ ಸಮನ್ವಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ ಎಂದು ತಿಳಿಸಿದರು.

*******

೨೦೨೬-೨೭ನೇ ಸಾಲಿಗೆ ಅತಿ ಹೆಚ್ಚು ಮತಗಳನ್ನು ಗಳಿಸುವ ಮೂಲಕ ಭಾರತ, ಅಂತಾರಾಷ್ಟ್ರೀಯ ಕಡಲ ಸಂಘಟನೆ-ಐಎಂಒ ಮಂಡಳಿಗೆ ಮರು ಆಯ್ಕೆಯಾಗಿದೆ. ಲಂಡನ್‌ನಲ್ಲಿ ನಿನ್ನೆ ಐಎಂಒ ಅಸೆಂಬ್ಲಿಯ ೩೪ನೇ ಅಧಿವೇಶನದಲ್ಲಿ ಕೌನ್ಸಿಲ್ ಚುನಾವಣೆಗಳು ನಡೆದವು. ಅಂತಾರಾಷ್ಟ್ರೀಯ ಸಮುದ್ರ ವ್ಯಾಪಾರದಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವ ಹತ್ತು ದೇಶಗಳನ್ನು ಒಳಗೊಂಡಿರುವ ವಿಭಾಗದಲ್ಲಿ ಭಾರತವು ಅತ್ಯಧಿಕ ಮತಗಳನ್ನು ಗಳಿಸಿತು. ಚುನಾವಣೆಯ ಸಮಯದಲ್ಲಿ ಚಲಾಯಿಸಲಾದ ೧೬೯ ಮಾನ್ಯ ಮತಗಳಲ್ಲಿ ೧೫೪ ಮತಗಳನ್ನು ಪಡೆಯಿತು.

ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಈ ಸಾಧನೆಯ ಬಗ್ಗೆ ಹರ್ಷ ವ್ಯಕ್ತಪಡಿಸಿ, ಇದು ಭಾರತದ ಕಡಲ ವಲಯಕ್ಕೆ ಹೆಮ್ಮೆಯ ಕ್ಷಣವಾಗಿದೆ ಎಂದು ಹೇಳಿದರು. ಭಾರತದ ಅತ್ಯಧಿಕ ಮತಗಳ ಸಂಖ್ಯೆಯು ಜಾಗತಿಕ ಸಾಗಣೆಯಲ್ಲಿ ಭಾರತದ ರಚನಾತ್ಮಕ ನಾಯಕತ್ವದಲ್ಲಿ ಅಂತಾರಾಷ್ಟ್ರೀಯ ಸಮುದಾಯದ ಬಲವಾದ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ. ಈ ಫಲಿತಾಂಶವು ಭಾರತ ಸರ್ಕಾರದ ನಿರಂತರ ಸುಧಾರಣೆಗಳು ಮತ್ತು ಕಡಲ ವಲಯವನ್ನು ಬಲಪಡಿಸಲು ಭವಿಷ್ಯದ ಉಪಕ್ರಮಗಳನ್ನು ಮತ್ತಷ್ಟು ಮೌಲ್ಯೀಕರಿಸುತ್ತದೆ. ಭಾರತವು ಸತತ ಎರಡನೇ ದ್ವೈವಾರ್ಷಿಕ ವರ್ಷದಲ್ಲಿ ಬಿ ವರ್ಗದಲ್ಲಿ ಅತ್ಯಧಿಕ ಮತಗಳನ್ನು ಪಡೆದುಕೊಂಡಿದ್ದು, ಅಮೃತ್ ಕಾಲ್ ಮ್ಯಾರಿಟೈಮ್ ವಿಷನ್-೨೦೪೭ಗೆ ರಾಷ್ಟ್ರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

*******

ಗೋವಾದಲ್ಲಿ ನಡೆದ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ವಿಶ್ವದಾದ್ಯಂತದ ಸಿನಿಮಾ ಪ್ರತಿಭೆಯನ್ನು ಗೌರವಿಸುವ ಅದ್ದೂರಿ ಪ್ರಶಸ್ತಿ ಪ್ರದಾನ ಸಮಾರಂಭದೊಂದಿಗೆ ಮುಕ್ತಾಯಗೊಂಡಿತು, ಅತ್ಯುತ್ತಮ ಚಲನಚಿತ್ರಕ್ಕಾಗಿ ಪ್ರತಿಷ್ಠಿತ ಗೋಲ್ಡನ್ ಪಿಕಾಕ್ ಪ್ರಶಸ್ತಿಯನ್ನು ಆಶ್ಲೀ ಮೇಫೇರ್ ನಿರ್ದೇಶಿಸಿದ ವಿಯೆಟ್ನಾಂ ಚಲನಚಿತ್ರ ಸ್ಕಿನ್ ಆಫ್ ಯೂತ್‌ಗೆ ನೀಡಲಾಯಿತು. ಸಿಲ್ವರ್ ಪಿಕಾಕ್ ವಿಭಾಗದಲ್ಲಿ, ಮರಾಠಿ ಚಲನಚಿತ್ರ ಗೊಂಧಳ್ ಗಾಗಿ ಸಂತೋಷ್ ದವಾಖರ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದರು. ಸ್ಪ್ಯಾನಿಷ್ ಚಲನಚಿತ್ರ ಎ ಪೊಯೆಟ್ ಗಾಗಿ ಉಬೇಮರ್ ರಿಯೋಸ್ ಅತ್ಯುತ್ತಮ ಪುರುಷ ನಟ ಪ್ರಶಸ್ತಿಯನ್ನು ಪಡೆದರು, ಸ್ಲೊವೇನಿಯ ಚಲನಚಿತ್ರ ಲಿಟಲ್ ಟ್ರಬಲ್ ಗರ್ಲ್ಸ್ ನಲ್ಲಿನ ಅಭಿನಯಕ್ಕಾಗಿ ಜರಾ ಸೋಫಿಜಾ ಓಸ್ತಾನ್ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದರು. ಇರಾನಿನ ಚಲನಚಿತ್ರ ನಿರ್ಮಾಪಕ ಹೆಸಮ್ ಫರಾಹ್‌ಮಂಡ್ ಮತ್ತು ಎಸ್ಟೋನಿಯಾ ನಿರ್ದೇಶಕ ಟೋನಿಸ್ ಪಿಲ್ ಅತ್ಯುತ್ತಮ ಚೊಚ್ಚಲ ಚಲನಚಿತ್ರ ನಿರ್ದೇಶಕ ಪ್ರಶಸ್ತಿಯ ಜಂಟಿ ವಿಜೇತರಾದರು. ಕೇಸರಿ ಅಧ್ಯಾಯ ೨ಕ್ಕಾಗಿ ಕರಣ್ ಸಿಂಗ್ ತ್ಯಾಗಿ ಭಾರತೀಯ ಚಲನಚಿತ್ರದ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಯನ್ನು ಪಡೆದರು. ಅತ್ಯುತ್ತಮ ವೆಬ್ ಸರಣಿ ಪ್ರಶಸ್ತಿಯನ್ನು ಬಂದಿಶ್ ಬ್ಯಾಂಡಿಟ್ಸ್ ಸೀಸನ್ ೨

ಪಡೆದುಕೊಂಡಿತು. ಶಾಂತಿ ಮತ್ತು ಅಂತರಸಾಂಸ್ಕೃತಿಕ ಸಂವಾದವನ್ನು ಉತ್ತೇಜಿಸಿದ್ದಕ್ಕಾಗಿ ಐಸಿಎಫ್‌ಟಿ-ಯುನೆಸ್ಕೋ ಗಾಂಧಿ ಪದಕವನ್ನು ನಾರ್ವೇಯ ಚಲನಚಿತ್ರ ಸೇಫ್ ಹೌಸ್‌ಗೆ ನೀಡಲಾಯಿತು. ಭಾರತೀಯ ಚಿತ್ರರಂಗದಲ್ಲಿ ೫೦ ವರ್ಷಗಳನ್ನು ಪೂರೈಸಿದ ಖ್ಯಾತ ನಟ ರಜನಿಕಾಂತ್ ಅವರನ್ನು ಸನ್ಮಾನಿಸಿದ್ದು ವಿಶೇಷವಾಗಿತ್ತು. ಕೃತಜ್ಞತೆ ಸಲ್ಲಿಸುತ್ತಾ ಅವರು, ಈ ಗೌರವ ಇಡೀ ಚಿತ್ರರಂಗಕ್ಕೆ ಸಲ್ಲುತ್ತದೆ. ತಾನು ಸಿನಿಮಾ ಮತ್ತು ನಟನೆಯನ್ನು ಪ್ರೀತಿಸುವುದರಿಂದ ತನಗೆ ನೂರು ಜನ್ಮಗಳಿದ್ದರೂ, ತಾನು ರಜನಿಕಾಂತ್ ಆಗಿ ಹುಟ್ಟಲು ಬಯಸುವುದಾಗಿ ತಿಳಿಸಿದರು. ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್, ಇಫೀ ಯ ಈ ಆವೃತ್ತಿಯು ಕಳೆದ ಹಲವಾರು ದಿನಗಳಲ್ಲಿ ಜಾಗತಿಕ ಸಹಯೋಗದಲ್ಲಿನ ಸೃಜನಶೀಲ ಮನಸ್ಸುಗಳು, ಕಲೆ ಮತ್ತು ಪ್ರತಿಭೆಯ ಗಮನಾರ್ಹ ಸಭೆಯಾಗಿದೆ ಎಂದರು. ಐಎಫ್‌ಎಫ್‌ಐ ಜಾಗತಿಕ ಸೃಜನಶೀಲ ಕೇಂದ್ರವಾಗಿ ಭಾರತದ ಸ್ಥಾನವನ್ನು ಬಲಪಡಿಸುವುದನ್ನು ಮುಂದುವರೆಸಿದ್ದು, ಕಥೆಗಾರಿಕೆಯಲ್ಲಿ ನಾವೀನ್ಯತೆ ಮತ್ತು ಸಂಪ್ರದಾಯ ಎರಡನ್ನೂ ಆಚರಿಸುತ್ತದೆ ಎಂದು ಚಲನಚಿತ್ರ ನಿರ್ಮಾಪಕ ಶೇಖರ್ ಕಪೂರ್ ಹೇಳಿದರು.

*******

ಪಂಜಾಬ್‌ನ ಮೊಹಾಲಿಯಲ್ಲಿ ಸೆಮಿಕಂಡಕ್ಟರ್ ಪ್ರಯೋಗಾಲಯವನ್ನು ಮೇಲ್ದರ್ಜೆಗೇರಿಸಲು ಮತ್ತು ವಿಸ್ತರಿಸಲು ಕೇಂದ್ರ ಸರ್ಕಾರ ೪ ಸಾವಿರದ ೫೦೦ ಕೋಟಿ ರೂಪಾಯಿ ಹೂಡಿಕೆ ಮಾಡಲಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈ?ವ್ ಹೇಳಿದ್ದಾರೆ. ಮೊಹಾಲಿಗೆ ನಿನ್ನೆ ಭೇಟಿ ನೀಡಿದ ಸಚಿವರು, ಮೊಹಾಲಿಯ ಸೆಮಿಕಂಡಕ್ಟರ್ ಪ್ರಯೋಗಾಲಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಸೂಕ್ತ ಮಾರ್ಗಸೂಚಿಯನ್ನು ರೂಪಿಸಿದ್ದಾರೆ. ಇದು ಉತ್ಪಾದನಾ ಸಾಮರ್ಥ್ಯದಲ್ಲಿ ದೊಡ್ಡ ಪ್ರಮಾಣದ ಹೆಚ್ಚಳವನ್ನು ಒಳಗೊಂಡಿರುತ್ತದೆ ಎಂದು ಸಚಿವರು ಹೇಳಿದ್ದಾರೆ. ಸಚಿವರು ಸೆಮಿಕಂಡಕ್ಟರ್ ಪ್ರಕ್ರಿಯೆ ಗ್ಯಾಲರಿ ಮತ್ತು ಅಭ್ಯುತನ ತರಬೇತಿ ಬ್ಲಾಕ್‌ಅನ್ನು ಉದ್ಘಾಟಿಸಿದರು.

*******

ಶ್ರೀಲಂಕಾದ ಕರಾವಳಿಯಲ್ಲಿ ಬೀಸುತ್ತಿರುವ ದಿತ್ವಾ ಚಂಡಮಾರುತ ಕಳೆದ ಕೆಲವು ಗಂಟೆಗಳಲ್ಲಿ ಶ್ರೀಲಂಕಾದಿಂದ ಸುಮಾರು ೪೦ ಕೀಲೋಮೀಟರ್ ಪಶ್ಚಿಮಕ್ಕೆ ೭ ಕಿಲೋಮೀಟರ್ ವೇಗದಲ್ಲಿ ಉತ್ತರ ವಾಯವ್ಯ ದಿಕ್ಕಿಗೆ ಚಲಿಸುತ್ತಿದೆ. ಇದು ಪುದುಚೇರಿಯಿಂದ ೩೮೦ ಹಾಗು ಚೆನ್ನೈನ ದಕ್ಷಿಣದಿಂದ ೪೯ ಕಿಲೋಮೀಟರ್ ದೂರದಲ್ಲಿದೆ. ಇದು ಈ ತಿಂಗಳ ೩೦ರ ಬೆಳಗಿನಜಾವ ಉತ್ತರ ತಮಿಳುನಾಡು ಮತ್ತು ದಕ್ಷಿಣ ಆಂಧ್ರ ಕರಾವಳಿಯ ಬಳಿಯ ನೈಋತ್ಯ ಬಂಗಾಳಕೊಲ್ಲಿಯನ್ನು ತಲುಪುವ ಸಾಧ್ಯತೆ ಇದೆ. ಈ ನಡುವೆ, ಶ್ರೀಲಂಕಾದಲ್ಲಿ ದಿತ್ವಾ ಚಂಡಮಾರುತ ವ್ಯಾಪಕ ಹಾನಿಯನ್ನುಂಟುಮಾಡುತ್ತಿದ್ದು, ಹಲವು ಪ್ರದೇಶಗಳಲ್ಲಿ ಪ್ರವಾಹ ಮತ್ತು ಭೂಕುಸಿತ ಉಂಟಾಗಿದೆ. ಮನೆಗಳಿಗೆ ಭಾರಿ ಹಾನಿಯಾಗಿದ್ದು, ಸಾರಿಗೆ ಸಂಪರ್ಕ ಕಡಿದುಕೊಂಡಿದೆ. ಭಾರತ, ಆಪರೇಷನ್ ಸಾಗರ್ ಬಂಧು ಅಡಿಯಲ್ಲಿ ತುರ್ತು ಸಹಾಯವನ್ನು ತ್ವರಿತವಾಗಿ ಒದಗಿಸಿದೆ. ನೌಕಾಪಡೆಯ ಹಡಗುಗಳು ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸುತ್ತಿದೆ.

*******

ಲಖನೌದಲ್ಲಿ ನಡೆಯುತ್ತಿರುವ ಸೈಯದ್ ಮೋದಿ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತೀಯ ಶಟ್ಲರ್‌ಗಳು ಉತ್ತಮ ಪ್ರದರ್ಶನ ನೀಡುತ್ತಿದ್ದು, ಪುರುಷರ ಸಿಂಗಲ್ಸ್, ಮಹಿಳಾ ಸಿಂಗಲ್ಸ್, ಮಹಿಳಾ ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಸೆಮಿಫೈನಲ್ ಹಂತಕ್ಕೇರಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ, ೧೬ ವರ್ಷದ ತನ್ವಿ ಶರ್ಮಾ, ಹಾಂಗ್‌ಕಾಂಗ್‌ನ ಸಿನ್ ಯಾನ್ ಹ್ಯಾಪಿ ಲೋ ಅವರನ್ನು ೨೧-೧೩, ೨೧-೧೯ ಅಂತರದಿಂದ ಸೋಲಿಸಿ ಕೊನೆಯ ನಾಲ್ಕರ ಘಟ್ಟ ತಲುಪಿದ್ದಾರೆ. ಅವರು ಈಗ ಐದನೇ ಶ್ರೇಯಾಂಕದ ಜಪಾನ್‌ನ ಹಿನಾ ಅಕೇಚಿಯನ್ನು ಎದುರಿಸಲಿದ್ದಾರೆ. ಉನ್ನತಿ ಹೂಡಾ ಕೂಡ ಭಾರತದ ರಕ್ಷಿತಾ ರಾಮರಾಜ್ ಅವರನ್ನು ೨೧-೧೫, ೧೩-೨೧, ೨೧-೧೬ ಅಂತರದಿಂದ ಸೋಲಿಸಿ ಮುನ್ನಡೆದರು. ಅವರು ಟರ್ಕಿಯ ನಾಲ್ಕನೇ ಶ್ರೇಯಾಂಕದ ನೆಸ್ಲಿಹಾನ್ ಅರಿನ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ, ಕಿಡಂಬಿ ಶ್ರೀಕಾಂತ್ ಸೆಮಿಫೈನಲ್ ತಲುಪಿದ್ದಾರೆ. ಅವರು ಮಿಥುನ್ ಮಂಜುನಾಥ್ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ, ಅಗ್ರ ಶ್ರೇಯಾಂಕದ ಗಾಯತ್ರಿ ಗೋಪಿಚಂದ್ ಮತ್ತು ತ್ರಿಶಾ ಜಾಲಿ ಐದನೇ ಶ್ರೇಯಾಂಕದ ಬೆಂಗಿಸು ಎರ್ಸೆಟಿನ್ ಮತ್ತು ನಾಜ್ಲಿಕನ್ ಇನ್ಸಿ ಅವರನ್ನು ೨೧-೧೫, ೨೧-೧೬ ರಲ್ಲಿ ಸೋಲಿಸಿ ಸೆಮಿಫೈನಲ್ ತಲುಪಿದರು. ಟ್ರೀಸಾ ಜಾಲಿ ಮಿಶ್ರ

ಡಬಲ್ಸ್‌ನಲ್ಲಿಯೂ ಮುನ್ನಡೆ ಸಾಧಿಸಿದರು. ಅವರು ಮತ್ತು ಅವರ ಸಹಆಟಗಾರ ಹರಿಹರನ್ ಅಮ್ಸಕರುಣನ್ ಜೋಡಿ ಆಸ್ಟ್ರೇಲಿಯಾದ ಆಂಡಿಕಾ ರಾಮದಿಯಾನ್‌ಸ್ಯಾ ಮತ್ತು ನೊಜೊಮಿ ಶಿಮಿಜು ಜೋಡಿಯನ್ನು ೨೧-೧೮, ೨೧-೧೪ ರಲ್ಲಿ ಸೋಲಿಸಿ ಸೆಮಿಫೈನಲ್ ತಲುಪಿದರು.

*******